**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**
**ಕ್ರಿಮಿನಲ್ ಮೊಕದ್ದಮೆ ನಂ. 590/2024.**

ಚಾಸಾ-21

ಪ್ರಾಸಾ-04

**ದಿನಾಂಕಃ 25-03-2026 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

| | |
|---|---|
| ಸಾಕ್ಷಿಯ ಹೆಸರು | ಃ ನಿತ್ಯಾನಂದ ತಂಃ ಗೋಪಾಲ ಪಂಡಿತ |
| ವಯಸ್ಸು | ಃ 58 ವರ್ಷ |
| ಉದ್ಯೋಗ | ಃ ಸಿ.ಪಿ.ಐ, ಜಿಲ್ಲಾ ವಿಶೇಷ ಘಟಕ, ಕಾರವಾರ |
| ವಾಸ | ಃ ಕಾರವಾರ |

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.</u>

1. ನಾನು ದಿಃ 17-06-2023 ರಿಂದ 02-02-2024 ರ ವರೆಗೆ ಜೋಯಿಡಾದ ಸಿ.ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ08-01-2024 ರಂದು ಈ ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಪಡೆದುಕೊಂಡು ಪರಿಶೀಲಿಸಿ, ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ಮೃತನ ಶವ ಪಂಚನಾಮೆಯನ್ನು ಜರುಗಿಸಿ, ಶವ ಪರೀಕ್ಷೆಗೆ ಮುಂದಿನ ಕ್ರಮ ಕೈಗೊಳ್ಳುವಂತೆ ಚಾಸಾ-19 ರವರಿಗೆ ಸೂಚಿಸಿರುತ್ತೇನೆ. ನಂತರ ಅದೇ ದಿನ ಬೆಳಿಗ್ಗೆ 09-15 ರಿಂದ 10-45 ರ ವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-7 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಜರುಗಿಸಿ, ಕಚ್ಚಾ ನಕಾಶೆ ಮತ್ತು ಫೋಟೋಗಳನ್ನು ತೆಗೆದಿರುತ್ತೇನೆ.

3. ಅದೇ ಸಮಯದಲ್ಲಿ ಸ್ಥಳದಲ್ಲಿದ್ದ ಅಪಘಾಕ್ಕೆ ಇಡಾದ ಎರಡು ಮೋಟಾರ ಸೈಕಲ್ ನಂ: ಕೆಎ-30/ಜೆ-3028 ಮತ್ತು ಕೆಎ-24/ವಾಯ್-3795 ನೇದವುಗಳನ್ನು ಯಾಂತ್ರಿಕ ಪರೀಕ್ಷೆಗಾಗಿ ಜಪ್ತುಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-6 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಮತ್ತು ಚಾಸಾ-17 ಮತ್ತು 18 ರವರಿಂದ ವರದಿಗಳನ್ನು ಪಡೆದುಕೊಂಡಿರುತ್ತೇನೆ.

4. ಅದೇ ದಿನ ಆರ್.ಟಿ.ಓ ರವರಿಗೆ ಅಪಘಾತಕ್ಕೆ ಇಡಾದ ವಾಹನಗಳ ತಪಾಸಣೆಗಾಗಿ ಕೋರಿಕೆಯನ್ನು ಸಲ್ಲಿಸಿರುತ್ತೇನೆ. ದಿಃ 16-01-2024 ರಂದು ಖಾನಾಪುರ ವೈದ್ಯಾಧಿಕಾರಿಗಳಿಗೆ ಶವ ಪರೀಕ್ಷಾ ವರದಿಯನ್ನು ನೀಡುವಂತೆ ಕೋರಿರುತ್ತೇನೆ ಮತ್ತು ದಿಃ 20-01-2024 ರಂದು ಶವ ಪರೀಕ್ಷಾ ವರದಿಯನ್ನು ಪಡೆದಿರುತ್ತೇನೆ. ಅದೇ ದಿನ ಐ.ಎಂ.ವಿ ವರದಿಯನ್ನು ಪಡೆದಿರುತ್ತೇನೆ

5. ದಿಃ 02-02-2024 ರಂದು ನನಗೆ ವರ್ಗಾವಣೆಯಾದ ಕಾರಣ ಮುಂದಿನ ತನಿಖೆಗಾಗಿ ಚಾಸಾ-22 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ.

6. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ **ನಿಪಿ-2** ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-2(ಬಿ)** ಎಂದು ಗುರುತಿಸಲಾಯಿತು.

7. ಸಾಕ್ಷಿಯು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ **ನಿಪಿ-3** ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-3(ಬಿ)** ಎಂದು

ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ಮತ್ತು 5 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

8. ಸಾಕ್ಷಿಯು ಶವ ತನಿಖಾ ವರದಿ, ಶವ ಪರೀಕ್ಷಾ ವರದಿ ಮತ್ತು ಐ.ಎಂ.ವಿ ವರದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಆರೋಪಿತರ ವಕೀಲರ ಸಹಮತಿಯೊಂದಿಗೆ ಅನುಕ್ರಮವಾಗಿ ನಿಪಿ-7, 8 ಮತ್ತು 11 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ದಂಡ ಪ್ರಕ್ರಿಯಾ ಸಂಹಿತೆ 309 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಸಮಯಾವಕಾಶವನ್ನು ಕೋರಿದ್ದರಿಂದ, ರೂ.300/- ದಂಡದೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**
**ಸಹಿ ಇದೆ/-**
**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**